# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1168 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆ.ಎಸ್.ಎಂ.ಸಿ.ಎ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಅಥವಾ ಇತರೆ ಯಾವುದೇ ಸರ್ಕಾರದ ಅಂಗ ಸಂಸ್ಥೆಗಳ ಎಷ್ಟು ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದೆ; ಈ ಕಾರ್ಯಕ್ರಮಗಳಿಗೆ ಭರಿಸಲಾದ ಮೊತ್ತವೆಷ್ಟು; (ಕಾರ್ಯಕ್ರಮವಾರು ಮಾಹಿತಿ ನೀಡುವುದು) | (see table below) ಮಾಹಿತಿಯನ್ನು **ಅನುಬಂಧ-I** ರಲ್ಲಿ ಲಗತ್ತಿಸಿದೆ. |
| ಆ) | ಈ ಕಾರ್ಯಕ್ರಮಗಳನ್ನು ಕೆ.ಎಸ್.ಎಂ.ಸಿ.ಎ ಸ್ವತಃ ಕೈಗೊಂಡಿದೆಯೆ ಅಥವಾ ಯಾವುದಾದರೂ ಬೇರೆ ಸಂಸ್ಥೆಗಳಿಗೆ/ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ಅಥವಾ ಟೆಂಡರ್ ಮೂಲಕ ನೀಡಿ ಅನುಷ್ಠಾಗೊಳಿಸಿದೆಯೆ; ಬೇರೆ ಸಂಸ್ಥೆಗಳಿಗೆ/ಗುತ್ತಿಗೆದಾರರಿಗೆ ನೀಡಲಾಗಿದೆಯೇ; ನೀಡಿದ್ದಲ್ಲಿ, (ಅವರ ವಿವರಗಳೊಂದಿಗೆ ಕಾರ್ಯಕ್ರಮವಾರು ಮಾಹಿತಿ ನೀಡುವುದು) | ಕೆ.ಎಸ್.ಎಂ.ಸಿ&ಎ ಸಂಸ್ಥೆಯಲ್ಲಿ ಕೆಟಿಪಿಪಿ ಕಾಯ್ದೆ, 1999 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ ಟೆಂಡರ್‌ನ್ನು ಆಹ್ವಾನಿಸಿ ವ್ಯವಹಾರ ಸಹವರ್ತಿಗಳ ನೇಮಕಾತಿ ಪ್ರಕ್ರಿಯೆಯನ್ನು ಮಾಡಲಾಗಿದ್ದು, ವ್ಯವಹಾರ ಸಹವರ್ತಿಗಳ ಮೂಲಕ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗುವುದು. ವಿವರಗಳನ್ನು **ಅನುಬಂಧ- II** ಲಗತ್ತಿಸಿದೆ. |
| ಇ) | ಕೆ.ಎಸ್.ಎಂ.ಸಿ.ಎ ವತಿಯಿಂದ ಕಾರ್ಯಕ್ರಮಗಳನ್ನು ಪಡೆಯುವ ಸಂಸ್ಥೆಗಳು/ಗುತ್ತಿಗೆದಾರರು ಕೆ.ಎಸ್.ಎಂ.ಸಿ.ಎ ನಲ್ಲಿ ನೋಂದಣಿ ಮಾಡಿಕೊಳ್ಳಬೇಕಿದಿಯೇ; ಹಾಗಿದ್ದಲ್ಲಿ, ಕೆ.ಎಸ್.ಎಂ.ಸಿ.ಎ.ನಲ್ಲಿ ಇಲ್ಲಿಯವರೆವಿಗೂ ನೋಂದಣಿಯಾಗಿರುವ ಸಂಸ್ಥೆಗಳು/ಗುತ್ತಿಗೆದಾರರು ಯಾರ್ಯಾರು; (ವಿವರಗಳನ್ನು ನೀಡುವುದು) | ಹೌದು, ವಿವರಗಳನ್ನು **ಅನುಬಂಧ- III** ರಲ್ಲಿ ಲಗತ್ತಿಸಿದೆ. |

Table in answer (ಅ):

| ಕ್ರ. ಸಂ | ಆರ್ಥಿಕ ವರ್ಷ | ಒಟ್ಟು ಕಾರ್ಯ ಕ್ರಮಗಳ ಸಂಖ್ಯೆ | ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2021-22 | 64 | 11,71,93,268 |
| 2 | 2022-23 | 291 | 107,01,10,054 |
| 3 | 2023-24 | 126 | 102,82,99,146 |

| | | |
|---|---|---|
| (ಈ) | ಕೆ.ಎಸ್.ಎಂ.ಸಿ.ಐ ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಅಥವಾ ಇತರೆ ಯಾವುದೇ ಸರ್ಕಾರದ ಅಂಗ ಸಂಸ್ಥೆಗಳಿಂದ ಕಾರ್ಯಕ್ರಮಗಳನ್ನು ರೂಪಿಸುವುದು. ಆಯೋಜನೆ, ಅನುಷ್ಠಾನ ಜಾವಾಬ್ದಾರಿಗಳನ್ನು ಪಡೆದಾಗ ಅವುಗಳ ಯೋಜನೆ, ರೂಪಿಸುವುದು ಮತ್ತು ಅನುಷ್ಠಾನದಲ್ಲಿ ಅನುಸರಿಸುತ್ತಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳೇನು? (ಕೆ.ಎಸ್.ಎಂ.ಸಿ.ಐ ಅಳವಡಿಸಿಕೊಂಡಿರುವ MOA, AOA ನ ಮಾಹಿತಿಯನ್ನು ಒದಗಿಸುವುದು) | • ಕೆ.ಎಸ್.ಎಂ.ಸಿ&ಐ ಸಂಸ್ಥೆಯಲ್ಲಿ ಕೆಟಿಪಿಪಿ ಕಾಯ್ದೆ, 1999 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಿ ವ್ಯವಹಾರ ಸಹವರ್ತಿಗಳ ನೇಮಕಾತಿ ಪ್ರಕ್ರಿಯೆಯನ್ನು ಮಾಡಲಾಗುವುದು.<br>• ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಕಾರ್ಯಕ್ರಮಗಳನ್ನು ಆಯೋಜಿಸಲು ಸಂಸ್ಥೆಯಲ್ಲಿ ನೊಂದಾಯಿತ ವ್ಯವಹಾರ ಸಹವರ್ತಿಗಳ ಮೂಲಕ ಸ್ಪರ್ಧಾತ್ಮಕ ದರಗಳನ್ನು ಪಡೆದು, ಕನಿಷ್ಠ ದರವನ್ನು ಸಲ್ಲಿಸಿರುವ ವ್ಯವಹಾರ ಸಹವರ್ತಿಗಳ ದರಗಳ ಅನ್ವಯ ಇಲಾಖೆಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.<br>• ಇಲಾಖೆಗಳು ಸಂಸ್ಥೆಯಿಂದ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಅನುಮೋದಿಸಿ ಕಾರ್ಯದೇಶವನ್ನು ನೀಡುತ್ತಾರೆ. ಅದರಂತೆ ಕನಿಷ್ಠ ದರವನ್ನು ಸಲ್ಲಿಸಿರುವ ವ್ಯವಹಾರ ಸಹವರ್ತಿಗಳಿಗೆ ಸಂಸ್ಥೆಯಿಂದ ಸದರಿ ಕಾರ್ಯವನ್ನು ನಿರ್ವಹಿಸಲು ಕಾರ್ಯದೇಶವನ್ನು ನೀಡಲಾಗುವುದು.<br>• ಕಾರ್ಯಚಟುವಟಿಕೆಯು ಪೂರ್ಣಗೊಂಡ ನಂತರ ವ್ಯವಹಾರ ಸಹವರ್ತಿಗಳು ಬಿಲ್ಲನ್ನು ಸಂಸ್ಥೆಗೆ ಸಲ್ಲಿಸುತ್ತಾರೆ. ಅದರಂತೆ ಸಂಸ್ಥೆಯಿಂದ ಬಿಲ್ಲನ್ನು ಹಣ ಪಾವತಿಗಾಗಿ ಇಲಾಖೆ/ನಿಗಮ/ಮಂಡಳಿಗಳಿಗೆ ಸಲ್ಲಿಸಲಾಗುವುದು.<br>• ಇಲಾಖೆಗಳಿಂದ ಬಿಲ್ಲನ ಮೊತ್ತವನ್ನು ಬಿಡುಗಡೆ ಮಾಡಿದ ನಂತರ ಸಂಸ್ಥೆಯಿಂದ ವ್ಯವಹಾರ ಸಹವರ್ತಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.<br>• MOA, AOA ರ ಮಾಹಿತಿಯನ್ನು **ಅನುಬಂಧ- IV** ರಲ್ಲಿ ಲಗತ್ತಿಸಿದೆ. |

ಸಂಖ್ಯೆ:ಸಿಐ 47 ಸಿಎಂಐ 2025 (ಇ)

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.